ವಿಚಾರ ಲಹರಿ

# ಯುವ ಲೇಖಕರಿಗೆ ಕಿವಿಮಾತು

ಜಗತ್ತು ಚಲನಶೀಲವಾಗಿರುವುದರಿಂದಲೇ ಬದುಕು ಸಹ್ಯವಾಗಿದೆ. ಹೊಸ ಆವಿಷ್ಕಾರಗಳಿಗೆ ಮನಸ್ಸು ಸದಾ ತೆರೆದುಕೊಂಡಿರುವುದರಿಂದಲೇ ಸಂಸ್ಕೃತಿಯು ಸ್ಥಿತ್ಯಂತರಕ್ಕೊಳಗಾಗುತ್ತಿದೆ, ಭಾಷೆಯೂ ಕಾಲಕಾಲಕ್ಕೆ ಹೊಸ ಹದ ಪಡೆದುಕೊಂಡು ಬೆಳೆಯುತ್ತಿದೆ. ವರ್ತಮಾನದಲ್ಲಿ ಫೇಸ್‌ಬುಕ್, ವಾಟ್ಸಾಪ್ ಮತ್ತಿತರ ವಿದ್ಯುನ್ಮಾನ ಸಾಧನಗಳ ಬಳಕೆಯಿಂದಾಗಿ ಭಾಷೆ ಕಲುಷಿತಗೊಳ್ಳುತ್ತಿದೆ ಎಂದು ಕೆಲವರು ಭಾವಿಸುತ್ತಾರೆ. ಅದು ಕಾಲದ ತುರ್ತು, ವ್ಯಾವಹಾರಿಕ ಜಗತ್ತಿನ ಓಟಕ್ಕೆ ಬೇಕಾಗುವ ಸಾಮಯಿಕ ಸ್ಪಂದನೆ. ಆ ಭಾಷೆಯನ್ನು ಶಾಸ್ತ್ರಕ್ಕೆ ಬಳಸಲಾಗುವುದಿಲ್ಲ. ಅದೇ ಫೇಸ್‌ಬುಕ್ಕಿನ ಮುಖಾಂತರ ಸಂವಹನಗೊಳ್ಳುವ ಸಾಹಿತ್ಯಕ ಬರವಣಿಗೆಗಳು ಒಂದು ಶಿಸ್ತಿಗೆ ಒಳಪಟ್ಟಿರುತ್ತವೆ ಎಂಬುದನ್ನು ಗಮನಿಸಬೇಕು. ಸಹಜವಾಗಿಯೇ ಅಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಬರವಣಿಗೆಗಳಿರುವುದು ಸಾಧ್ಯ. ಆ ಮೂಲಕವೂ ಜ್ಞಾನಪಿಪಾಸುವಿಗೆ ಪುಸ್ತಕಗಳಿಂದ ಹೊರತಾದ ಒಂದು ಮಾಧ್ಯಮ ದೊರಕಿದಂತಾಗಿದೆ.

ಇತ್ತೀಚೆಗೆ ತರುಣ ಪೀಳಿಗೆಯು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯದತ್ತ ಆಕರ್ಷಣೆಗೊಳಗಾಗುತ್ತಿದ್ದಾರೆ. ಅದಕ್ಕೆ ಪ್ರೇರಣೆ ಮೊಬೈಲೇ ಆಗಿರಬಹುದು ಎಂದರೆ ಆಶ್ಚರ್ಯಪಡುವ ಅಗತ್ಯವಿಲ್ಲ. ಹೆಚ್ಚು ತಿಳಿಯಬೇಕೆನ್ನುವ ಕುತೂಹಲ ಅವರನ್ನು ಸಹಜವಾಗಿಯೇ ಸಾಂಪ್ರದಾಯಿಕ ಪುಸ್ತಕಗಳತ್ತ ಸೆಳೆಯುತ್ತದೆ. ಲೇಖಕನನ್ನು ಸೃಷ್ಟಿಸುವುದು ಪರಿಸರ ಮತ್ತು ಆತನ ಸಂವೇದನಾಶೀಲತೆ. ನಾವು ಒತ್ತು ಕೊಡಬೇಕಾಗಿರುವುದು ಒಳ್ಳೆಯ ಬರವಣಿಗೆಗೆ ಮತ್ತು ನಿಲ್ಲುವ ಬರವಣಿಗೆಗೆ. ಅದು ಹೇಗೆ ಸಾಧ್ಯ ಎಂದರೆ, ತಾನು, ತನ್ನದು, ತನ್ನವರು ಎನ್ನುವುದನ್ನು ಬಿಟ್ಟು ಆತನ ಚಿಂತನೆಗಳಿಗೆ ಸಾಮುದಾಯಿಕತೆ ಒದಗಿಬರಬೇಕು. ಅದು ಧರ್ಮಾತೀತವೂ, ಜಾತ್ಯತೀತವೂ ಆಗಿರಬೇಕು. ಒಟ್ಟಾರೆ ಮನುಷ್ಯಪರವಾಗಿರಬೇಕು. ಶ್ರೀಮಂತರ, ಬಲಾಢ್ಯರ, ಪುರೋಹಿತರ, ಬಂಡವಾಳಶಾಯಿಗಳ ಪರವಾಗಿ ಮಾತನಾಡುವವರು ದೇವರ ವಿರುದ್ಧವಾಗಿ ಮಾತನಾಡುವವರೆಂದು ಪರಿಗಣಿಸಬಹುದು (ಲೇಖಕ ಆಸ್ತಿಕನಾಗಿದ್ದರೆ). ಯಾಕೆಂದರೆ ದೇವರು ಬೇಕಾಗಿರುವುದು ಬಡವರಿಗೆ, ದುರ್ಬಲರಿಗೆ, ಹಸಿದವರಿಗೆ. ಎಲ್ಲ ಸಂಕಷ್ಟಗಳಿಂದ ಆ ಮಾರ್ಗದಲ್ಲಿ ಪಾರಾಗಲು ಬಯಸುವವರಿಗೆ. ಆದ್ದರಿಂದ ಸಾಹಿತ್ಯದಲ್ಲಿ ಎಡ, ಬಲ ಎಂದು ಎಣಿಸುವುದು ತಪ್ಪು. ಯಾವುದು ಸಾಮುದಾಯಿಕವೊ, ಬಹುತ್ವವೊ, ಮನುಷ್ಯಪರವೊ ಅದನ್ನು ಒಳ್ಳೆಯ ಸಾಹಿತ್ಯವೆಂದು ಕರೆಯಬಹುದು. ಯಾವುದು ವ್ಯಕ್ತಿನಿಷ್ಠವೊ, ಧರ್ಮನಿಷ್ಠವೊ, ಹುಸಿ ಉದ್ದೇಶಗಳನ್ನು, ಸುಳ್ಳಿನ ಪ್ರಚಾರವನ್ನು ಒಳಗೊಂಡಿರುವುದೊ ಅಂತಹುದು ನಿಸ್ಸಂದೇಹವಾಗಿ ಕೆಟ್ಟ ಸಾಹಿತ್ಯವಾಗಿರುತ್ತದೆ.

ಈ ಕಾರಣದಿಂದಾಗಿ ಎಡ ಅಥವಾ ಬಲ ಎಂಬ ತಾತ್ವಿಕ ಪಂಥೀಯ ಸಾಹಿತ್ಯವೆಂದು ವಿಂಗಡಿಸದೇ ಒಳ್ಳೆಯ ಮತ್ತು ಕೆಟ್ಟ ಸಾಹಿತ್ಯವೆಂದಷ್ಟೇ ಗುರುತಿಸುವುದು ಅನುಕೂಲಕರವೆಂದು ನನ್ನ ಅಭಿಪ್ರಾಯ. ಸಾಹಿತ್ಯದಲ್ಲಿ ಮಧ್ಯಮ ಮಾರ್ಗವೆಂಬುದಿಲ್ಲ. ಯಾಕೆಂದರೆ ಸತ್ಯವನ್ನು ಸತ್ಯವೆಂದೇ ಗಣಿಸಬೇಕು ಮತ್ತು ಸುಳ್ಳನ್ನು ಸುಳ್ಳು ಎಂದೇ ಕರೆಯಬೇಕಾದ, ಇರುವುದನ್ನು ಇರುವ ಹಾಗೆಯೆ ಹೇಳಬೇಕಾದ ಅನಿವಾರ್ಯತೆ ಸಾಹಿತ್ಯಕ್ಕಿದೆ. ಮಧ್ಯಮಮಾರ್ಗವೆಂದರೆ ತಟಸ್ಥರಾಗಿ ಉಳಿಯುವುದು ಅಥವಾ ಪಲಾಯನಗೊಳ್ಳುವುದು ಎಂದೇ ಆಗುತ್ತದೆ. ಅಧ್ಯಾತ್ಮದ ಅನ್ವೇಷಕರಿಗೆ ಬುದ್ಧ ಹೇಳಿದ ಮಧ್ಯಮಮಾರ್ಗವೆ ಬೇರೆ. ಒಂದು ಕಡೆ ದೇಹವನ್ನು ದಂಡಿಸುವ, ಪೀಡಿಸುವ, ಅನ್ನಾಹಾರಗಳಿಂದ ವಂಚಿಸುತ್ತಾ ಮೋಕ್ಷಮುಖಿಯಾದ ನಿರ್ಗ್ರಂಥರಿದ್ದರು. ಇನ್ನೊಂದೆಡೆ ಯಜ್ಞಯಾಗಾದಿ ಹಿಂಸಾತ್ಮಕ ವ್ರತಗಳಲ್ಲಿ ನಿರತರಾಗಿ ಲೌಕಿಕ ಮಾರ್ಗದಲ್ಲಿಯೆ ಮುಕ್ತಿಯನ್ನರಸುತ್ತಾ ಭೋಗಲಾಲಸೆಗಳಿಗೆ ಒಪ್ಪಿಸಿಕೊಂಡಿದ್ದ ವೈದಿಕ ಪರಂಪರೆಯೂ ಇತ್ತು. ಇವೆರಡು ಅತಿಗಳ ನಡುವೆ ಬುದ್ಧ ದೇಹ ಮತ್ತು ಮನಸ್ಸನ್ನು ಸಮವಾಗಿ ಬೆಸೆದು ಇಹದ ದುಃಖವನ್ನು ಕಳೆಯುವ ಒಂದು ಮಾರ್ಗವನ್ನು ಹುಡುಕಿದ. ಅದನ್ನು ಮಧ್ಯಮಮಾರ್ಗವೆಂದು ಕರೆದ. ಬದಲಾವಣೆ ಪ್ರಕೃತಿಯ ನಿಯಮವಾಗಿರುವುದರಿಂದ ಯಥಾಸ್ಥಿತಿವಾದವನ್ನು ಒಪ್ಪಿಕೊಳ್ಳುವುದು ಒಳ್ಳೆಯ ಸಾಹಿತಿಯ ಲಕ್ಷಣವಲ್ಲ. ಸಾಹಿತ್ಯವನ್ನು ಬರೆದಾದಮೇಲೆ ನಮ್ಮ ಜವಾಬುದಾರಿ ಮುಗಿಯಿತು ಎಂದುಕೊಳ್ಳುವುದು ತರವಲ್ಲ. ಅದು ಎಂದಾದರೂ ಚರ್ಚೆಗೊಳಗಾಗಬಹುದು, ಯಾರಿಂದಲಾದರೂ ಪರೀಕ್ಷೆಗೊಳಪಡಬಹುದು. ಉತ್ತರದಾಯಿತ್ವ ನಮ್ಮದೇ ಆಗಿರುತ್ತದೆ.

ಒಳ್ಳೆಯ ಸಾಹಿತಿಯಾಗುವುದು ಹೇಗೆ? ಎಂದು ಅನೇಕರು ನನ್ನನ್ನು ಪ್ರಶ್ನಿಸುತ್ತಾರೆ. ಅದಕ್ಕೆ ಒಂದು ಸಿದ್ಧ ಪ್ರಮೇಯ (**formula**) ಎಂಬುದು ಇಲ್ಲ. ನೀವು– ಹುಟ್ಟಿನಿಂದಲೂ ನಿಮ್ಮ ಪರಿಸರದೊಂದಿಗೆ ರೂಪುಗೊಳ್ಳುವ ನಿಮ್ಮ ಮನಸ್ಸು– ಕಾರಣವೆಂದು ಸ್ಥೂಲವಾಗಿ ಹೇಳಬಹುದು. ಇಂದ್ರಿಯಗೋಚರ ವಾಸ್ತವವಾದೀ ಅನುಭವಗಳನ್ನು ಪ್ರತಿಮೆಗಳ ಮುಖಾಂತರ ನೋಡುವುದೇ ಕಲೆ. ಸಾಮಾನ್ಯನೊಬ್ಬನಲ್ಲಿ ಅನುಭವಗಳು, ಸಂಗತಿಗಳ ಯಾಂತ್ರಿಕ ಸಂಗ್ರಹವಾಗಿ ಉಳಿದುಬಿಡುತ್ತವೆ. ಸೃಜನಶೀಲನಾದವನೊಳಗೆ ಅವು ಆಲೋಚನೆಯ ಜೀವರಸದೊಂದಿಗೆ ಬೆರೆತು ಜೀರ್ಣವಾಗಿ ಮರುಹುಟ್ಟು ಪಡೆಯುತ್ತವೆ. ಇದಕ್ಕೆ ಪ್ರಯತ್ನವೂ ಇರಬೇಕು. ಭಾಷೆಯ ಪ್ರಯೋಗದಲ್ಲಿ ಖಚಿತತೆಯನ್ನು ಸಾಧಿಸಬೇಕು. ಅನುಭವ ಪ್ರಾಮಾಣಿಕತೆ ಇರಬೇಕು. ಪರಕಾಯ ಪ್ರವೇಶವಷ್ಟೇ ಸಾಲದು. ಮುಗ್ಧತೆಯೂ ನಿಮ್ಮೊಳಗೆ ಪ್ರವೇಶ ಪಡೆಯುತ್ತಿರಬೇಕು. ಆಗಲೇ ವಿಸ್ಮಯಗಳನ್ನು ಎದುರುಗೊಳ್ಳಲು ಸಾಧ್ಯ. ಸಾಹಿತಿಯಾದವನು ತನ್ನ ಆಲೋಚನಾಕ್ರಮದಲ್ಲಿ ಯಾದರೂ ಸರಳವಾಗಿರಬೇಕು. ನೇರತೆ, ಸಂಕೋಚಪ್ರಿಯತೆ ಅಪೇಕ್ಷಣೀಯ ಗುಣಗಳು.

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪ್ರತಿಭೆ ಎನ್ನುವುದೊಂದಿರುತ್ತದೆ. ಅದು ಜ್ಞಾನಕೋಶವೆಂಬ ಮೊಸರುಗಡಿಗೆಯಲ್ಲಿ ಕಡೆಗೋಲಿನಂತೆ ಕೆಲಸಮಾಡುತ್ತದೆ. ಅಲ್ಲಿ ವಿಜ್ಞಾನವಿದ್ದರೆ ನೀವು ವಿಜ್ಞಾನಿ, ಸಾಹಿತ್ಯವಿದ್ದರೆ ಸಾಹಿತಿ, ರಾಜಕಾರಣವಿದ್ದರೆ ರಾಜಕಾರಿಣಿ ಅಷ್ಟೆ. ಅದನ್ನು ಉಪಯೋಗಿಸುವ ಜಾಣ್ಮೆ, ತಾಳ್ಮೆ ನಿಮ್ಮಲ್ಲಿರಬೇಕು. ಕೇವಲ ಪಾಂಡಿತ್ಯವನ್ನು ನಂಬಿಕೊಂಡರೆ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಛಂದಸ್ಸು, ವ್ಯಾಕರಣಗಳೆಂಬ ತಾಂತ್ರಿಕ ಸರಕುಗಳು ಕೇವಲ ಪೂರಕವಾಗಿರುತ್ತವೆ. ಲಂಕೇಶ್ ಒಂದುಕಡೆ ಬರೆಯುತ್ತಾರೆ. ನಿಮ್ಮ ಪಾಪವನ್ನು, ಗುಟ್ಟುಗಳನ್ನು, ದೌರ್ಬಲ್ಯಗಳನ್ನು, ಏಕಾಂತತೆಯನ್ನು ಎದುರಿಸುವುದನ್ನು ಕಲಿತುಕೊಳ್ಳಿ. ನಿಮ್ಮ ಬರವಣಿಗೆಗೆ ವಿಚಿತ್ರ ಶಕ್ತಿ, ಸೌಂದರ್ಯ ಬರುತ್ತದೆ ಎಂದು. ಹೆಚ್ಚು ಬರೆಯುವುದರಿಂದ ಪ್ರಯೋಜನವಾಗಲಾರದು. ನಿಮ್ಮೊಳಗಿನ ಚೈತನ್ಯವನ್ನು ಹಿಂಡಿ, ಬಸಿದು ಬರೆಯಬೇಕು. ಆಗಲೇ ಅದು ಎಲ್ಲರ ಗಮನ ಸೆಳೆಯುತ್ತದೆ. ಎಜ್ರಾಪೌಂಡ್ ಒಂದು ಮಾತು ಹೇಳುತ್ತಾನೆ; 'ಮಹಾಕಾವ್ಯಗಳನ್ನು ಬರೆಯುವುದರ ಬದಲಾಗಿ ನಿಮ್ಮ ಕಾವ್ಯ ಬದುಕಿನಲ್ಲಿ ಒಂದಾದರೂ ಅವಿಸ್ಮರಣೀಯ ರೂಪಕವನ್ನು ರಚಿಸಿ'.

ಇದಿಷ್ಟು ಸಾಹಿತ್ಯ ಕಮ್ಮಟವೊಂದರಲ್ಲಿ ಉದಯೋನ್ಮುಖ ತರುಣ ಲೇಖಕ ಮಿತ್ರರೊಡನೆ ನಾನು ಹಂಚಿಕೊಂಡದ್ದು.

■ ಮೂಚಿ

## ಮಾತೇ ಮುತ್ತು

★ ನಿಮ್ಮ ಪ್ರತಿ ಮುಗುಳ್ನಗುವೂ ಪ್ರೀತಿಯ ಕ್ರಿಯೆ, ಇನ್ನೊಬ್ಬರಿಗೆ ನೀಡುವ ಉಡುಗೊರೆ.

—ಮದರ್ ತೆರೆಸಾ

★ ಪರಿಪೂರ್ಣತೆಯ ಬಗ್ಗೆ ಭಯ ಬೇಡ, ನೀವು ಅದನ್ನು ತಲುಪಲಾಗುವುದಿಲ್ಲ.

—ಸಾಲ್ವಡೋರ್ ಡಾಲಿ

★ ಪ್ರತಿಯೊಬ್ಬರೂ ಒಂದೇ ಭಾಷೆಯಲ್ಲಿ ಮುಗುಳ್ನಗುತ್ತಾರೆ.

—ಅನಾಮಿಕ

★ ಸಜ್ಜನಿಕೆಯ ಒಂದು ಶಬ್ದ, ಕರುಣೆಯ ಒಂದು ನೋಟ ಮತ್ತು ಮುಗ್ಧ ಮುಗುಳ್ನಗೆ ಪವಾಡಗಳನ್ನೇ ಮಾಡಬಲ್ಲುದು.

—ವಿಲಿಯಂ ಹ್ಯಾಜ್ಲಿಟ್

★ ಎಲ್ಲ ಮಕ್ಕಳೂ ಕಲಾವಿದರೇ. ಆದರೆ ಬೆಳೆದ ಬಳಿಕ ಆ ಕಲಾವಿದನನ್ನು ಹೇಗೆ ಉಳಿಸಿಕೊಳ್ಳುವುದು ಎನ್ನುವುದಷ್ಟೇ ಸಮಸ್ಯೆ.

—ಪಾಬ್ಲೊ ಪಿಕಾಸೊ

★ ಇನ್ನೊಬ್ಬರನ್ನು ಪ್ರೀತಿ ಮತ್ತು ಕರುಣೆಯಿಂದ ಕಂಡರೆ, ನಮ್ಮೊಳಗಿನ ಸಂತೋಷ ಮತ್ತು ಶಾಂತಿ ಹೆಚ್ಚುತ್ತದೆ.

—ದಲೈ ಲಾಮಾ

★ ಕಡಿಮೆ ಭಯಪಡಿ, ಹೆಚ್ಚು ಭರವಸೆ ಇಡಿ. ಕಡಿಮೆ ತಿನ್ನಿ, ಹೆಚ್ಚು ಜಗಿಯಿರಿ. ಕಡಿಮೆ ಮಾತನಾಡಿ, ಹೆಚ್ಚು ವಿಷಯ ತಿಳಿಸಿ.

—ಸ್ವೀಡನ್ನಿನ ಗಾದೆ